ಶ್ರೀ ಎಚ್. ಗಂಗಾಧರನ್.—ಅವರು ಆಡಿರುವಂತಹ ಮಾತುಗಳು ಪತ್ರಿಕೆಗಳಲ್ಲಿ ವರದಿಯಾದ ಮೇಲೆ ಬಹಳ ಗೊಂದಲ ಉಂಟುಮಾಡಿದೆ. ಆದ್ದರಿಂದ ಅವರ ನಿಲುವಿನಲ್ಲಿ ಏನಾದರೂ ಬದಲಾವಣೆ ಮಾಡಿಕೊಂಡಿದ್ದಾರೆಯೇ ಎಂಬ ಬಗ್ಗೆ ಸರ್ಕಾರದವರು ಹೇಳಿಕೆ ಕೊಡಬೇಕು. ಸಚಿವರಾದವರಿಗೆ ಜವಾಬ್ದಾರಿಗಳಿರುತ್ತವೆ. ಆದ್ದರಿಂದ ಮಂತ್ರಿಗಳಾದವರು ಈ ರೀತಿ ದೇಶದ ಹಿತದೃಷ್ಟಿಯಿಂದ ಮಾತನಾಡುವುದು ಒಳ್ಳೆಯದಲ್ಲವೆಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಪತ್ರಿಕೆಗಳಲ್ಲಿ ಅವರ ಹೆಸರಿನಲ್ಲಿ ಬಂದಿರತಕ್ಕಂಥ ಹೇಳಿಕೆಯನ್ನು ನಾನು ನೋಡಿದ್ದೇನೆ. ಅದರ ಮರುದಿವಸ ಅವರು ಬೆಳಗಾಂನಿಂದ ಬಂದ ತಕ್ಷಣವೇ ನನ್ನನ್ನು ಭೇಟಿ ಆಗಿದ್ದರು. ಪತ್ರಿಕೆಗಳಲ್ಲಿ ತಪ್ಪು ತಪ್ಪಾಗಿ ವರದಿಯಾಗಿದೆ, ನಾನು ಆ ರೀತಿ ಹೇಳಲಿಲ್ಲವಾದ್ದರಿಂದ ನಾನು ಮತ್ತೆ ಅದಕ್ಕೆ ಕಾಂಟ್ರಡಿಕ್ಟ್ ಆದಂಥ ಒಂದು ಸ್ಟೇಟ್‌ಮೆಂಟನ್ನು ಇಂದೇ ಪತ್ರಿಕೆಗಳಿಗೆ ಕೊಟ್ಟಿದ್ದೇನೆಂದು ಹೇಳಿದರು. ಈ ಒಂದು ಸ್ಟೇಟ್‌ಮೆಂಟ್ ಸಹ ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ಈ ವಿಚಾರವನ್ನು ಇಲ್ಲಿಗೇ ಮುಗಿಸುವುದು ಒಳ್ಳೆಯದು. ಇದರ ಜೊತೆಗೆ ಅವರು ಇವೊತ್ತು ಇಲ್ಲಿ ಹಾಜರಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಶ್ರೀ ಸೇಟ್ ಅವರು ಕೊಟ್ಟಿರುವ ಹೇಳಿಕೆಯನ್ನು ನೋಡಿರುವುದಾಗಿ ಹೇಳಿದರು. ಕನ್ನಡದ ಅಭಿವೃದ್ಧಿ ವಿಚಾರದಲ್ಲಿ ಸಾಹಿತಿಗಳು, ಕಲಾವಿದರು ಹಾಗೂ ಸಾರ್ವಜನಿಕರು ಯಾವ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಮತ್ತು ಶಿಕ್ಷಣ ಮಾಧ್ಯಮ ಯಾವ ರೀತಿ ಇರಬೇಕು ಎಂಬ ಬಗ್ಗೆ ಏನು ಹೇಳಿದ್ದಾರೆ, ಅದನ್ನೆಲ್ಲಾ ಒಪ್ಪಿ ಶ್ರೀ ಸೇಟ್ ಅವರು ಒಂದು ಹೇಳಿಕೆ ಕೊಟ್ಟಿದ್ದಾರೆಂಬ ಅಭಿಪ್ರಾಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅವರ ಅಭಿಪ್ರಾಯ ಈ ರೀತಿ ಇದ್ದರೆ ನಾವು ಈ ಬಗ್ಗೆ ಹೇಳುವುದೇನೂ ಇಲ್ಲ.

(iii) ಧರ್ಮಸ್ಥಳದಲ್ಲಿ ನದಿಯಲ್ಲಿ ಬಿದ್ದು ಸತ್ತುಹೋದ ಎರಡು ಶವಗಳನ್ನು ಪೋಲೀಸರು ದಫನ್ ಮಾಡಿರುವ ಬಗ್ಗೆ.

ಶ್ರೀ ಶಂಕರರೆಡ್ಡಿ (ಶಿರಗುಪ್ಪ).—ಮಾನ್ಯ ಅಧ್ಯಕ್ಷರೇ ನಮ್ಮ ಶಿರಗುಪ್ಪ ತಾಲ್ಲೂಕ್‌ಗೆ ಸೇರಿದ ಶ್ರೀ ವೆಂಕೋಬರಾವ್ ಎನ್ನುವವರ ಪುತ್ರ ಮತ್ತು ಆತನ ಸ್ನೇಹಿತರು ತೀರ್ಥಯಾತ್ರೆಗೆಂದು ಹೋದಾಗ ಧರ್ಮಸ್ಥಳದ ನದಿಯಲ್ಲಿ ಇಬ್ಬರೂ ಬಿದ್ದು ಸತ್ತುಹೋದಂಥ ಸಂದರ್ಭದಲ್ಲಿ ಅಲ್ಲಿನ ಪೋಲೀಸರು ಹೆಣಗಳನ್ನು ಮೇಲೆ ತೆಗೆದು ಯಾರಿಗೂ ತಿಳಿಸದೆ ದಫನ್ ಮಾಡಿರುತ್ತಾರೆ. ಇದಾದ ಒಂದು ತಿಂಗಳ ನಂತರ ವಿಷಯವನ್ನು ತಿಳಿದ ಶ್ರೀ ವೆಂಕೋಬರಾವ್ ಅವರು ಧರ್ಮಸ್ಥಳಕ್ಕೆ ಹೋಗಿ ಅಲ್ಲಿನ ಪೋಲೀಸರಲ್ಲಿ ವಿಚಾರ ಮಾಡಿ ಈ ಸುದ್ದಿಯನ್ನು ಪತ್ರಿಕೆಗಳ ಮತ್ತು ರೇಡಿಯೋ ಮೂಲಕ ಪ್ರಸಾರ ಮಾಡಿದ್ದರೆ ನನಗೆ ಕೂಡಲೇ ತಿಳಿಯುತ್ತಿತ್ತು ಎಂದು ಹೇಳಿದಾಗ ಅಲ್ಲಿದ್ದ ಹೆಡ್-ಕಾನ್ಸ್‌ಟೇಬಲ್ ನೀನು ಯಾರೋ ಮಗನೇ ಇದನ್ನೆಲ್ಲಾ ಹೇಳಲು ಎಂದು ಆಡಬಾರದ ಮಾತುಗಳನ್ನು ಆಡಿ ಅವರ ಕಪಾಳಕ್ಕೆ ಹೊಡೆದು ಬಡಿದು ಮಾಡಿದ್ದೇ ಅಲ್ಲದೆ ಅವರ ಜನಿವಾರವನ್ನೂ ಸಹ ಹರಿದುಹಾಕಿದ ನಂತರ ಆ ರಾತ್ರಿಯೆಲ್ಲಾ ಲಾಕಪ್‌ನಲ್ಲಿಟ್ಟು ಅವರ ಬಳಿಯಲ್ಲಿದ್ದ 250 ರೂಪಾಯಿಗಳನ್ನೂ ಮತ್ತು ರಿಸ್ಟ್-ವಾಚನ್ನು ಸಹ ಕಿತ್ತುಕೊಂಡು ಈ ಪ್ರಕರಣವನ್ನು ಯಾರ ಬಳಿಯಾದರೂ ಹೇಳಿದರೆ ಮತ್ತೆ ಪೋಲೀಸರ ಕಾಟ ಕೊಡುವುದಾಗಿ ಹೇಳಿ ಅವರನ್ನು ಹೆದರಿಸಿ ಮುಚ್ಚಳಿಕೆಯನ್ನು ಸಹ ಅವರಿಂದ ಬರೆಸಿಕೊಂಡು ಹೊರಗೆ ಬಿಟ್ಟಿದ್ದಾರೆ. ಇಷ್ಟೆಲ್ಲಾ ನಡೆದ ನಂತರ ನಾನು ಈ ವಿಷಯದ ಬಗ್ಗೆ ಒಂದು ಪತ್ರವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ 2 ತಿಂಗಳ ಹಿಂದೆ ಬರೆದೆ. ಆದರೆ ಅವರಿಂದ ಸೌಜನ್ಯಕ್ಕಾದರೂ ಈ ವಿಷಯವನ್ನು ಪರಿಶೀಲನೆ ಮಾಡುತ್ತೇವೆಂದು ಹೇಳುವ ಒಂದು ಉತ್ತರ ನನಗೆ ಬರಲಿಲ್ಲ. ಆದ್ದರಿಂದ ಈ ಬಗ್ಗೆ ಇಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ, ಶ್ರೀ ವೆಂಕೋಬರಾವ್ ಅವರು ತನ್ನ ಮಗ ಕಳೆದ ಒಂದು ತಿಂಗಳಿನಿಂದ ಎಲ್ಲಿಗೆ ಹೋದ ಎಂಬ ವಿಚಾರ ಆತನ ಸ್ನೇಹಿತರಿಂದಲೂ ತಿಳಿಯದಿದ್ದಾಗ ಒಂದು ದಿನ ಸತ್ತು ಹೋಗಿರುವ ವಾರ್ತೆ ಬರುತ್ತದೆ. ಆನಂತರ ಇವರು ಸಂಬಂಧಪಟ್ಟ ಪೋಲೀಸ್ ಠಾಣೆಯಲ್ಲಿ ಹೋಗಿ ವಿಚಾರ ಮಾಡಿದಾಗ, ಜನರಿಗೆ ರಕ್ಷಣೆ ಕೊಡುವಂತಹ ಅಧಿಕಾರಿಗಳೇ ಮಗನನ್ನು ಕಳೆದುಕೊಂಡ ತಂದೆಗೆ ಸೂಕ್ತ ಉತ್ತರ ವನ್ನೂ ಸಹ ಹೇಳತಕ್ಕಂಥ ಒಂದು ಸೌಜನ್ಯವನ್ನು ತೋರಿಸದೆ ಅವರ ಅಂಗಿಯನ್ನು ಬಿಚ್ಚಿಸಿ ಅಲ್ಲಿದ್ದ ಹೆಡ್-ಕಾನ್ಸ್‌ಟೇಬಲ್ ಅವರ ಕಪಾಳಕ್ಕೆ ಹೊಡೆದಿದ್ದಾರೆ. ಅಷ್ಟೇ ಅಲ್ಲ ರಾತ್ರಿಯೆಲ್ಲಾ ಪೋಲೀಸ್ ಕಸ್ಟಡಿಯಲ್ಲಿಯೇ ಇಟ್ಟುಕೊಂಡು ಮಲಮೂತ್ರ ಮಾಡುವುದಕ್ಕೂ ಸಹ ಬಿಟ್ಟಿಲ್ಲ ಮತ್ತು ಕುಡಿಯಲು ನೀರನ್ನೂ ಸಹ ಕೊಟ್ಟಿಲ್ಲ. ಇಂತಹ ಅನೇಕ ಪ್ರಕರಣಗಳಲ್ಲಿ ಪೋಲೀಸರು ಹದ್ದುಮೀರಿ ನಡೆದುಕೊಳ್ಳುವಂತಹ ಪ್ರವೃತ್ತಿ ಏನಿದೆ, ಇದನ್ನು ಕರ್ನಾಟಕದ ಜನತೆ ಬಹಳ ಗಂಭೀರವಾಗಿ ವಿಚಾರ ಮಾಡುತ್ತಿದ್ದಾರೆ. ಸತ್ತ ಮಗನ ಬಗೆ ಕೇಳಲು ಹೋದಾಗ ಈ ರೀತಿ ವರ್ತನೆ ಮಾಡಿದ್ದು ಸರಿಯೇ ಎಂಬ ಬಗ್ಗೆ ಸರ್ಕಾರದವರು ಉತ್ತರ ಕೊಡಬೇಕು.

ಶ್ರೀ ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೇ, ಈ ಒಂದು ಪ್ರಕರಣ ನನ್ನ ಕ್ಷೇತ್ರವಲ್ಲಿ ನಡೆದಿದೆ. ಶ್ರೀ ವೆಂಕೋಬರಾವ್ ಅವರು ತನ್ನ ಮಗನು ಸತ್ತ ಬಗ್ಗೆ ವಿಚಾರಣೆ ಮಾಡಲು ಧರ್ಮಸ್ಥಳದ ಸ್ಟೇಟ್-

ಪೋಸ್ಟ್ ಪೋಲೀಸ್ ಸ್ಟೇಷನ್‌ಗೆ ಹೋದಾಗ ಅಲ್ಲಿದ್ದ ಹೆಡ್‌ಕಾನ್ಸ್‌ಟೇಬಲ್ ಸರಿಯಾದ ಉತ್ತರ ಕೊಡದೆ ಕೇಳಲು ಹೋದವರನ್ನು ಹೊಡೆದು ಅವರ ಜನಿವಾರವನ್ನು ಕಿತ್ತುಹಾಕಿ ಲಾಕಪ್‌ನಲ್ಲಿ ಹಾಕಿ ಮಾರನೇ ದಿವಸ ಹೊರಗೆ ಬಿಟ್ಟಿದ್ದಾರೆ. ಇವರ ಮಗನ ಹತ್ತಿರವಿದ್ದ ಟ್ರಾನ್ಸಿಸ್ಟರ್ ರೇಡಿಯೋ, ಟೇಪ್-ರೆಕಾರ್ಡರ್, ವಾಚ್ ಮುಂತಾದ ಯಾವ ವಸ್ತುಗಳನ್ನೂ ಸಹ ವಾಪಸ್ ಕೊಟ್ಟಿಲ್ಲ. ಧರ್ಮಸ್ಥಳಕ್ಕೆ ಇವರ ಮಗ ಹೋದಾಗ 4 ಜನರು ಸೇರಿಕೊಂಡು ಒಂದು ರೂಮನ್ನು ಪಡೆದಿದ್ದರು. ಈ 4 ಜನರಲ್ಲಿ ಇಬ್ಬರು ನದಿಗೆ ಬಿದ್ದು ಸತ್ತಮೇಲೆ ಉಳಿದ ಇಬ್ಬರು ಯಾರು, ಎಲ್ಲಿಗೆ ಹೋದರು ಎಂಬುದನ್ನು ವಿಚಾರಣೆ ಮಾಡಲು ಹೋದಾಗ ಪೋಲೀಸರು ಪೆಟ್ಟು ಕೊಟ್ಟಿದ್ದಾರೆ. ಸರ್ಕಾರದವರು ಮೊದಲು ಈ ಪೋಲೀಸರ ದೌರ್ಜನ್ಯವನ್ನು ನಿಲ್ಲಿಸಬೇಕು. ಈ ಹೆಡ್-ಕಾನ್ಸ್‌ಟೇಬಲನ್ನು ಮೊದಲು ಅಮಾನತ್ತಿನಲ್ಲಿಟ್ಟು ಈ ಪ್ರಕರಣವನ್ನು ತನಿಖೆ ಮಾಡಬೇಕೆಂದು ತಮ್ಮ ಮೂಲಕ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ವಿವರಣೆ ಕೊಟ್ಟಿದ್ದಾರೆ. ನಾನು ಪುನಃ ವಿವರಣೆ ಕೊಡಲಿಕ್ಕೆ ಹೋಗುವುದಿಲ್ಲ. ಉದ್ದೇಶವೇನೆಂದರೆ ತಂದೆ ಮಗನನ್ನು ಕಳೆದುಕೊಂಡು ಪೋಲೀಸ್ ಸ್ಟೇಷನ್‌ಗೆ ಹೋದಾಗ ಅವರು ಅನುಕಂಪ ವ್ಯಕ್ತಪಡಿಸಬೇಕಾಗಿತ್ತು. ಇದು ಎಲ್ಲರಿಗೂ ಅನುಕಂಪ ವ್ಯಕ್ತಪಡಿಸತಕ್ಕ ವಿಷಯ. ಈಜು ಬಾರದೆ ಇರತಕ್ಕವರು ಮುಳುಗುತ್ತಿದ್ದಾಗ ಅವರನ್ನು ರಕ್ಷಿಸಲಿಕ್ಕೆ ಹೋಗಿ ಆತನು ಕೂಡ ಸತ್ತಿದ್ದಾನೆ. ಈ ದುರಂತ ನಡೆದದ್ದು ತಂದೆತಾಯಿಗಳಿಗೆ ಗೊತ್ತಿಲ್ಲ. ಆತ ಸತ್ತ ವಿಷಯವನ್ನು ರೇಡಿಯೋ ಮೂಲಕ ಬಿತ್ತರಿಸಬೇಕಾಗಿತ್ತು, ಪತ್ರಿಕೆಗಳ ಮೂಲಕ ಬರೆಸಬೇಕಾಗಿತ್ತು. ಈ ರೀತಿ ಮಾಡಲಿಕ್ಕೆ ಪೋಲೀಸ್ ಇಲಾಖೆಯಲ್ಲಿ ಕಾನೂನು ಇದೆ. ಅವರು ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿಲ್ಲ. ಮಾನ್ಯಮಂತ್ರಿಗಳು ಬಳ್ಳಾರಿಗೆ ಹೋಗಿದ್ದಾಗ ಅವರನ್ನು ಕಂಡು ಅರ್ಜಿ ಕೊಡಲು ಸತ್ತವನ ತಂದೆ ಕಾಯ್ದರು. ಆದರೆ, ಪೋಲೀಸ್ ಅಧಿಕಾರಿಗಳು ಮುಖ್ಯಮಂತ್ರಿಗಳನ್ನು ಯಾರೂ ಭೇಟಿ ಮಾಡುವ ಹಾಗೆ ಇಲ್ಲವೆಂದು ಹೇಳಿದಾಗ, ಆತ ಅರ್ಜಿಯನ್ನು ಬೆಂಗಳೂರಿಗೆ ಪೋಸ್ಟ್ ಮೂಲಕ ಮುಖ್ಯಮಂತ್ರಿಗಳ ವಿಳಾಸಕ್ಕೆ ಕಳುಹಿಸಿದ್ದಾನೆ. ಆ ಅರ್ಜಿ ನಿಮ್ಮ ಕಛೇರಿಗೆ ದಿನಾಂಕ 27-7-1983 ರಂದು ಬಂದು ತಲುಪಿದೆ, ಅದರ ರಶೀತಿ ಆತನಿಗೆ ಹೋಗಿದೆ. ಮಗನನ್ನು ಕಳೆದುಕೊಂಡುತಹ ವಿಚಾರ ತಂದೆಗೆ ಗೊತ್ತಾಗಿಲ್ಲ. ಇದು ಏತಕ್ಕೆ ಆಯಿತು ? ಮಗನನ್ನು ಕಳೆದುಕೊಂಡ ತಂದೆತಾಯಿಗಳ ಗೋಳನ್ನು ನೋಡಿದರೆ ಎಲ್ಲರಿಗೂ ಅರ್ಥವಾಗುತ್ತದೆ. ಆತ ತಮ್ಮ ಕಛೇರಿಗೆ ಅರ್ಜಿ ಕಳುಹಿಸಿ ಒಂದು ತಿಂಗಳ ಮೇಲಾಗಿದೆ, ವಿಚಾರ ಏನೆಂದು ಗೊತ್ತಿಲ್ಲ. ಆತ ಕಳುಹಿಸಿದ ಅರ್ಜಿಗೆ ಉತ್ತರ ಕಳುಹಿಸತಕ್ಕ ಸೌಜನ್ಯ ನೀವು ಏತಕ್ಕೆ ತೋರಿಸಿಲ್ಲ. I will look into it. ಅಂದರೆ ನೀವು ನೋಡಿ. ಸದನಕ್ಕೆ ಉತ್ತರ ಬೇಕಾಗುತ್ತದೆ. ಪೋಲೀಸ್ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ದಯಮಾಡಿ ಯಾವಾಗ ಏನು ನಡೆದಿದೆ ಎಂಬುದನ್ನು ತಮ್ಮ ಇಲಾಖೆಯ ಮತಿಯಿಂದ ವಿವರಗಳನ್ನು ತರಿಸಿ ನಮಗೆ ಹೇಳಿದರೆ ಒಳ್ಳೆಯದು.

ಅಧ್ಯಕ್ಷರು.—ತಾವು ಎಲ್ಲವನ್ನೂ ಹೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳೂ ಸಹ he said that he will look into the matter. I cannot go beyond that.

SRI S. BANGARAPPA.—I will look into the matter ಅಂದರೆ ಪೋಲೀಸ್ ಇಲಾಖೆ ರಕ್ಷಣೆ ಕೊಡತಕ್ಕ ಕಾರ್ಯದಲ್ಲಿ ಏನು ಕ್ರಮ ತೆಗೆದುಕೊಂಡಿದೆ ? ತಂದೆತಾಯಿಗಳಿಗೆ ವಿಷಯವನ್ನು ತಿಳಿಸಿದ್ದಾರೆಯೇ ? ಮಗ ಏನಾದ ಎಂದು ಕೇಳಲಿಕ್ಕೆ ಹೋದಾಗ ಹೊಡೆದಿದ್ದಾರೆ, ಇದನ್ನು ನಾವು ತಡೆದು ಕೊಳ್ಳುವುದಕ್ಕೆ ಆಗುವುದಿಲ್ಲ.

ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ ಮುಖ್ಯಮಂತ್ರಿಗಳು ಈ ಸದನಕ್ಕೆ ಇದರ ಬಗ್ಗೆ ಯಾವಾಗ ಹೇಳಿಕೆ ಕೊಡುತ್ತಾರೆ ? I don't press that it should be done to-day itself. ನಾನು ಆ ಅಭಿಪ್ರಾಯದಿಂದ ಹೇಳುತ್ತಿಲ್ಲ. ಅಧ್ಯಕ್ಷರು ನಮ್ಮನ್ನು ಅರ್ಥಮಾಡಿಕೊಳ್ಳಬೇಕು, ಸದನಕ್ಕೆ ಯಾವಾಗ ಉತ್ತರ ಹೇಳುತ್ತೀರಿ ? ಅದು ಬಹಳ ಮುಖ್ಯ.

MR. SPEAKER.—Whether the Chief Minister has anything to say ?

ಶ್ರೀ ಕೆ. ಶಿವಮೂರ್ತಿ.—ಸಾಮಾನ್ಯವಾಗಿ ಅಧಿಕಾರಿಗಳು ಹೇಳತಕ್ಕ ಮಾತು I will look into it ಎಂದು ಹೇಳುತ್ತಾರೆ.

ಅಧ್ಯಕ್ಷರು.—ಇನ್ನೇನು ಹೇಳಬೇಕೆಂದು ಹೇಳುತ್ತೀರಿ ?

ಶ್ರೀ ಕೆ. ಶಿವಮೂರ್ತಿ.—ನಮ್ಮ ಪ್ರಶ್ನೆಗೆ ಯಾವಾಗ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ? ಅರ್ಜಿ ಕೊಟ್ಟ ತಕ್ಷಣ ಅಧಿಕಾರಿಗಳು ಹೇಳುವ ಮಾತು ಹೇಳುವುದು ಬೇಡ.

ಶ್ರೀ ರಾಮಕೃಷ್ಣ ಹೆಗಡೆ.—ಇವತ್ತು ಈ ವಿಚಾರವನ್ನು ಎತ್ತಿದ್ದೀರಿ, ಇಂತಿಷ್ಟೇ ಸಮಯದಲ್ಲಿ ಹೇಳಿಕೆ ಕೊಡುತ್ತೇನೆಂದು ಹೇಳುವುದು ಕಷ್ಟ.

ಶ್ರೀ ಎಸ್. ಬಂಗಾರಪ್ಪ .—ಯಾಕೆ ? This, I don't agree. You have got wireless.

SRI RAMAKRISHNA HEGDE .—You may not agree but I cannot dance to your tune.

SRI. S. BANGARAPPA .—We have every right to demand.

SRI RAMAKRISHNA HEGDE .—You cannot force me like that. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಉತ್ತರ ಹೇಳುತ್ತೇನೆ.

(Interruptions)

SRI S. BANGARAPPA .—It is too much.

ಅಧ್ಯಕ್ಷರು .—ನಾನು ನಿಂತಿದ್ದೇನೆ, ತಾವೆಲ್ಲಾ ಕುಳಿತುಕೊಳ್ಳಬೇಕು. ನಾನು ಪ್ರತಿ ದಿವಸ ಪದೇ ಪದೇ ಹೇಳುತ್ತಿದ್ದೇನೆ. Let us not try to widen the scope of dicussion on matter under Rule 334. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಪರಿಶೀಲನೆ ಮಾಡಿ ಹೇಳಿಕೆ ಕೊಡುತ್ತೇನೆ ನೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. There are so many other questions too. I can understand your feelings. ನಿಮ್ಮ ಅಭಿಪ್ರಾಯಕ್ಕೆ ವಿರೋಧವಾಗಿದ್ದೇನೆ ಎನ್ನುವ ಅರ್ಥವನ್ನಾಗಲಿ ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಬಾರದು ಎನ್ನುವ ಅಭಿಪ್ರಾಯ ನನ್ನದಲ್ಲ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಉತ್ತರ ಕೊಡುತ್ತೇನೆಂದು ಮುಖ್ಯಮಂತ್ರಿಗಳು ಉತ್ತರ ಹೇಳಿದ್ದಾರೆ.

ಶ್ರೀ ಎಂ. ರಾಮಪ್ಪ .—ಮಾನ್ಯ ಮುಖ್ಯಮಂತ್ರಿಗಳು ಕೂಡ ಉತ್ತರ ಹೇಳುವಾಗ ಸಮಾಧಾನದಿಂದ ಉತ್ತರ ಹೇಳಬೇಕು.

MR. SPEAKER.—I cannot force him and I beg of you to kindly co-operate. Let us go to the next subject.

SRI. K. H. RANGANATH.—We co-operate with the Chair. ತಾವು "beg of you" ಅನ್ನುವಷ್ಟರಮಟ್ಟಿಗೆ ನಡೆದುಕೊಂಡಿಲ್ಲ, ತಾವು ಆ ಪದ ಬಳಸಬಾರದು. ಮುಖ್ಯಮಂತ್ರಿಗಳು ಇಲ್ಲಿದ್ದಾರೆ. ತಂದೆತಾಯಿಗಳು ಹೋದಾಗ ಅವರಿಗೆ ಅಪಮಾನವಾಗಿದೆ. ಇಂತಹ ಪರಿಸ್ಥಿತಿ ಇರುವುದರಿಂದ ಅತಿ ಜಾಗ್ರತೆಯಾಗಿ ಏತಕ್ಕೆ ಉತ್ತರ ತರಿಸುವುದಕ್ಕಾಗುವುದಿಲ್ಲ ? ನಾಳೆ ನಾಡಿದ್ದು ಉತ್ತರ ತರಿಸಬಹುದು, ಮುಖ್ಯ ಮಂತ್ರಿಗಳ ಕೈಯಲ್ಲಿ ನೇರವಾಗಿ ಖಾತೆ ಇದೆ. ಉತ್ತರ ತರಿಸಿ ಬೇಗ ಕೊಡಲಾಗುತ್ತದೆಂದು ಹೇಳಿದರೆ ತಪ್ಪಾಗುವುದಿಲ್ಲ, ಅದೇನು ದೊಡ್ಡ ವಿಚಾರವಲ್ಲ. ಅಲ್ಲಿ ನಡೆದಿರತಕ್ಕ ವಿಷಯಗಳ ವಿವರ ತರಿಸಿಕೊಳ್ಳುವುದಕ್ಕೆ ಕಷ್ಟವೇನೂ ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗ್ಗಡೆ .—ಈ ನಿಯಮದ ಕೆಳಗಡೆ ಯಾವುದೇ ವಿಚಾರವನ್ನೂ ಮಾನ್ಯ ಸದಸ್ಯರುಗಳು ಎತ್ತಿದಾಗ ಅಧಿಕಾರದಲ್ಲಿರತಕ್ಕ ಸರ್ಕಾರ ಉತ್ತರ ಕೊಡಬೇಕು, ಅದರಲ್ಲಿ ನಿರ್ಬಂಧವಿಲ್ಲ. ಇಷ್ಟರೊಳಗೆ ಕೊಡಬೇಕೆನ್ನುವುದೂ ಮುಖ್ಯವಲ್ಲ. ಇದು ಕಡಿಮೆ ಮಹತ್ವದ್ದು ಎಂದೂ ಅಲ್ಲ. ತಂದೆತಾಯಿಗಳು ಒಬ್ಬ ಮಗನನ್ನು ಕಳೆದುಕೊಂಡಾಗ ಏನಾಗುತ್ತದೆ, ನನಗೂ ಮಗ ಇದ್ದಾನೆ. ಆ ರೀತಿಯಾದಾಗ ಹೃದಯದಲ್ಲಿ ಯಾವ ರೀತಿಯ ವೇದನೆಯಾಗುತ್ತದೆ ಎನ್ನುವುದು ನನಗೆ ಗೊತ್ತಿಲ್ಲವೆಂದು ಅಲ್ಲ. ಈ ನಿಯಮದ ಕೆಳಗಡೆ ಇಂತಿಷ್ಟೇ ದಿವಸಗಳಲ್ಲಿ ಉತ್ತರ ಕೊಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಪ್ರಶ್ನೆ ರೂಪದಲ್ಲಿ ಕೇಳಿದರೆ 10 ದಿವಸಗಳಲ್ಲಿ ಉತ್ತರ ಬರುತ್ತದೆ. ಬೇರೆ ಬೇರೆ ನಿಯಮಗಳ ಪ್ರಕಾರ ಬೇರೆ ಬೇರೆ ರೀತಿ ಉತ್ತರ ಕೊಡಬೇಕಾಗುತ್ತದೆ. ಆದಷ್ಟು ಬೇಗ ಉತ್ತರ ಕೊಡುತ್ತೇವೆ. ಇದೇ ರೀತಿ ಮಾಡಬೇಕು ಅಂದರೆ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ ಸರ್ಕಾರ ಸಹಾನುಭೂತಿಯಿಂದ ಇದೆ. ಉತ್ತರ ಬರಲಿಕ್ಕೆ 10 ದಿವಸಗಳಾಗಬಹುದು, 4 ದಿವಸಗಳಲ್ಲಿ ಬಂದರೆ ಆಗಲೇ ಕೊಡುತ್ತೇವೆ. ಈ ನಿಯಮದ ಕೆಳಗೆ ಇಂತಿಷ್ಟೇ ತಾರೀಖಿಗೆ ಉತ್ತರ ಕೊಡಬೇಕೆಂದು ಹೇಳಿದರೆ ಅದು ಸಾಧ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ .—ರೂಲ್ ಪ್ರೊಟೆಕ್ಷನ್ ತೆಗೆದುಕೊಂಡು ಅದನ್ನು ಪ್ರೊಟೆಕ್ಟ್ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ನಾನು ಪದೇ ಪದೇ ರೂಲ್ 334ರ ವಿಚಾರ ಹೇಳುತ್ತಿದ್ದೇನೆ. Rule 334 is just to bring the matter to the notice of the House and not even to the Government. I am repeatedly telling you about it but despite the fact, I am trying to help you. ನಾವು ಒಂದೊಂದೇ ಸ್ಕೋಪ್‌ನ ಒಳಗಡೆ ಕೆಲಸ ಮಾಡು

ವುದಾದರೆ ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಈ ವಿಷಯವನ್ನು ಇಲ್ಲಿಗೆ ಬಿಟ್ಟೋಣ. ಮುಂದಕ್ಕೆ ಹೋಗೋಣ.

ಶ್ರೀ ಎಸ್. ಬಂಗಾರಪ್ಪ.—ನಾವು ಶೀಘ್ರವಾಗಿ ಪ್ರಸ್ತಾಪಮಾಡಿ ಉತ್ತರ ಪಡೆಯಲಿಕ್ಕೆ ನಮ್ಮ ನಿಯಮಗಳ ಪ್ರಕಾರ ನಮಗೆ ಏನೂ ಸಿಕ್ಕಿಲ್ಲ.

MR. SPEAKER.—Short notice question. ವಿಷಯ ಬಹಳ ಗಂಭೀರವಾದುದು. ಆದರೆ ನಿಲುವಳಿ ಸೂಚನೆಗಳಿವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂತಹ ಉತ್ತರವನ್ನು ಪಡೆದುಕೊಂಡು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ನಾವು ಬಂದಿಲ್ಲ. ಅದು ಸಾಧ್ಯವೂ ಕೂಡ ಇಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಒಂದು ನಾಲ್ಕು ದಿವಸಗಳಲ್ಲಿ ಉತ್ತರವನ್ನು ಒದಗಿಸಿಕೊಡುತ್ತಾರೋ ಅಥವಾ ಒಂದು ವಾರದಲ್ಲಿ ಉತ್ತರವನ್ನು ಒದಗಿಸಿಕೊಡುತ್ತಾರೋ ಎನ್ನತಕ್ಕಂಥದ್ದನ್ನು ದಯವಿಟ್ಟು ತಿಳಿಸಬೇಕು. ಅವರಿಗೆ ಉತ್ತರ ತರಿಸಲು ಆಗಲಿಲ್ಲವೆಂದು ಹೇಳಿದ ಮೇಲೆ ಬೇರೆ ಯಾರಿಂದ ಆ ಬಗ್ಗೆ ಉತ್ತರ ತರಿಸುವುದಕ್ಕೆ ಆಗುತ್ತದೆ?

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ನನಗೆ ಉತ್ತರ ಯಾವಾಗ ಕೊಡುತ್ತಾರೆಂದು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ತಿಳಿಸಿದರೆ ಒಳ್ಳೆಯದು. ಇನ್ನು ನಾಲ್ಕು ದಿವಸಗಳಲ್ಲಿ ತರಿಸಿಕೊಡುತ್ತಾರೋ, ಅಥವಾ ಒಂದು ವಾರದಲ್ಲಿ ತರಿಸಿಕೊಡುತ್ತಾರೋ ಎಂಬುದು ತಿಳಿಸಿದರೆ ಒಳ್ಳೆಯದು.

ಅಧ್ಯಕ್ಷರು.—ಸ್ವಾಮಿ, ತಮ್ಮ ನೋಟೀಸ್ ಪ್ರಕಾರ ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಕಡ್ಡಾಯವಾಗಿ ಉತ್ತರ ಹೇಳಬೇಕೆಂದು ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ತಾವು ಒತ್ತಾಯ ಮಾಡಿ ಉತ್ತರ ಕೊಡಿಸುವುದು ಕಷ್ಟವಾಗುತ್ತದೆ. ಅದು ಈ ಸದನದ ನಿಯಮ ಕೂಡ ಅಲ್ಲ. ಅದು ನನಗೆ ಗೊತ್ತಿದೆ.

ಅಧ್ಯಕ್ಷರು.—ಸ್ವಾಮಿ, ತಾವು ಈ ರೀತಿ ಪಟ್ಟು ಹಿಡಿದು ಕುಳಿತುಕೊಂಡರೆ ಬೇರೆಯವರಿಗೆ ತೊಂದರೆಯಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ತಾವು ನನ್ನ ರಕ್ಷಣೆಗೆ ಬರಬೇಕು. ಇಲ್ಲದಿದ್ದರೆ ನಮಗೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು.—ನನ್ನ ವ್ಯಾಪ್ತಿ ಮೀರಿ ನಾನು ನಿಮಗೆ ಸಹಾಯ ಮಾಡಿದ್ದೇನೆ. ನನಗೂ ಕೂಡ ಒಂದು ವ್ಯಾಪ್ತಿ ಇರುತ್ತದೆ. ಆ ವ್ಯಾಪ್ತಿ ಮೀರಿ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಿದ್ದರೆ ಈ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ತಾವು ದಯಮಾಡಿ ನನ್ನನ್ನು ಅರ್ಥ ಮಾಡಿಕೊಳ್ಳಬೇಕು. ಅಲ್ಲಿ ಮಗನನ್ನು ಕಳೆದುಕೊಂಡ ತಂದೆಯ ಗತಿಯನ್ನು ತಾವು ನೋಡಿದರೆ ತಮಗೆ ಅರ್ಥವಾಗುತ್ತದೆ.

ಅಧ್ಯಕ್ಷರು.—ಸ್ವಾಮಿ, ತಾವು ನೋಟೀಸ್ 334 ರ ಪ್ರಕಾರ ಕೊಟ್ಟಿದ್ದೀರಿ. ಅದರ ಮೇರೆಗೆ ನಾವು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನನಗೆ ಯಾವುದಾದರೊಂದು ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ತಿಳಿಸಿದರೆ ಒಳ್ಳೆಯದು.

ಶ್ರೀ ಬಿ. ರಾಚಯ್ಯ.—ಸ್ವಾಮಿ, ನನ್ನದೊಂದು ಕ್ರಿಯಾಲೋಪವಿದೆ. ಅದು ಏನೆಂದರೆ ಮಾನ್ಯ ಸದಸ್ಯರು 334 ರ ಪ್ರಕಾರ ನೋಟೀಸ್ ಕೊಟ್ಟಿದ್ದಾರೆ. ಆ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಕಡ್ಡಾಯವಾಗಿ ಉತ್ತರ ಹೇಳಬೇಕೆಂದು ನಾವು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲವೆಂದು ತಾವೂ ಕೂಡ ಹೇಳಿದ್ದೀರಿ. ಆದರೂ ಕೂಡ ಮಾನ್ಯ ಸದಸ್ಯರು ಒತ್ತಾಯ ಮಾಡುತ್ತಿದ್ದಾರೆ. ಇದು ಸದನದ ಗೌರವಕ್ಕೆ ಸರಿಯಾದುದಲ್ಲವೆಂದು ನನ್ನ ಭಾವನೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನಾವು ಈ ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ಎಲ್ಲಾ ರೀತಿಯ ಸಹಕಾರವನ್ನೂ ಕೊಟ್ಟಿದ್ದೇವೆ. ಈ ಸದನದಲ್ಲಿ ಅಗೌರವ ತರುವಂಥ ಪದ್ಧತಿಯನ್ನು ನಾನು ರೂಪಿಸುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ನಾವು ಈಗ 334 ರ ಪರಿಶೀಲನೆ ಮಾಡಿದಾಗ ನಮಗೆ ಏನು ಕಂಡುಬರುತ್ತದೆಂದರೆ ಆ ಪ್ರಕಾರ ನಾವು ಕೆಲವಾರು ವಿಷಯಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಬಹುದು. ಆದರೆ ನಾವು ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ 4–5 ವಿಚಾರಗಳನ್ನು ಬಹಳ ಗರಿಷ್ಠ

ಪ್ರಮಾಣದಲ್ಲಿ ಪ್ರಸ್ತಾಪ ಮಾಡಿ ಇಲ್ಲಿ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಆನಂತರ ಮಾನ್ಯ ಸದಸ್ಯರು ತಮಗೆ ನೋಟೀಸ್ ಕೊಟ್ಟ ಮೇರೆಗೆ ತಾವು ಆ 4–5 ವಿಷಯಗಳನ್ನು ಪ್ರಸ್ತಾಪ ಮಾಡಲು ಅನುಮತಿಯನ್ನು ಕೊಟ್ಟಿದ್ದೀರಿ. ಆದರೆ ನಾವು ಆ ವಿಷಯವನ್ನು ಪ್ರಸ್ತಾಪ ಮಾಡುವಾಗ ಸದನದ ಯಾವುದೇ ಒಂದು ಕಾನೂನಿನ ಚೌಕಟ್ಟಿನಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಅದಕ್ಕಾಗಿ ಸದನದ ಸದಸ್ಯರೆಲ್ಲರೂ ಸಹ ಸಹಕಾರವನ್ನು ಕೊಡಬೇಕು. ಆ ಎಲ್ಲಾ ರೀತಿಯ ಸಹಕಾರವನ್ನು ನಾವೆಲ್ಲಾ ಕೊಟ್ಟಿದ್ದೇವೆ. ಆದರೆ 334ರ ಚೌಕಟ್ಟಿನಲ್ಲಿ ನೋಡಿದರೆ ಇಲ್ಲಿ ಎರಡು ವಿಷಯಗಳು ಬರುತ್ತವೆ. ಮೊದಲನೆಯದು ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗಬೇಕಾದರೆ ನಾವು ಕಾನೂನಿನ ಚೌಕಟ್ಟಿನಲ್ಲಿ ನಡೆಯಬೇಕಾಗುತ್ತದೆ. ಆ ರೀತಿಯಲ್ಲಿ ಮಾನ್ಯ ಸದಸ್ಯರು ಮೊದಲನೆಯದಾಗಿ ಬ್ರೀಫ್ ಆಗಿ ಹೇಳಿಕೆ ಕೊಟ್ಟು ಅದಕ್ಕೆ ಮಾನ್ಯ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಅದಕ್ಕೆ ತಾವು ಕೂಡ ಅನುಮತಿಯನ್ನು ಕೊಟ್ಟಿದ್ದೀರಿ. ಮಾನ್ಯ ಮಂತ್ರಿಗಳು ಅದರ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಮತ್ತೆ ಮಾನ್ಯ ಅಧ್ಯಕ್ಷರೂ ಕೂಡ ಆ ಬಗ್ಗೆ ಪ್ರಸ್ತಾಪ ಮಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟ ಮಾತ್ರಕ್ಕೆ ಮುಗಿಯಿತು ಎಂದು ಎಲ್ಲಿಯೂ ಕೂಡ ಹೇಳಿಲ್ಲ. ಅದರ ಜೊತೆಗೆ ಮಾನ್ಯ ಸದಸ್ಯರು 334ರಂತೆ ನೋಟೀಸ್ ಸಹ ಕೊಟ್ಟಿದ್ದಾರೆ. ಆದರೆ ಸರ್ಕಾರದವರು ಟೈಮ್ ಮತ್ತು ಡೇಟ್ ಕೊಟ್ಟರೆ ಒಳ್ಳೆಯದು. ಅವರು ಕೊಡದಿದ್ದರೆ ಅದು ಒಂದು ರೀತಿಯಲ್ಲಿ ಆಭಾಸ ಆಗುತ್ತದೆ. ಮಾನ್ಯ ಮಂತ್ರಿಗಳು ಕೊಟ್ಟಂತಹ ಉತ್ತರ ಅಪೂರ್ಣವಾಗಿರುತ್ತದೆ. ಸರ್ಕಾರದವರು ತಮ್ಮ ಒಂದು ಇತಿಮಿತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಿದರೆ ಮಾನ್ಯ ಸದಸ್ಯರಿಗೆ ಉತ್ತರವನ್ನು ಈಗಲೇ ಒದಗಿಸಿಕೊಡಬಹುದು. ಆದರೆ ಮಾನ್ಯ ಮುಖ್ಯಮಂತ್ರಿಗಳು ಆದಷ್ಟು ಬೇಗ ಕೊಡಿಸಿಕೊಡುತ್ತೇನೆಂದು ಉತ್ತರ ಹೇಳಿದ್ದಾರೆ. ಆದರೆ ಎರಡನೇ ಹಂತದ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಪರಿಶೀಲನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮೊದಲನೆಯ ಹಂತ, ಎರಡನೆಯ ಹಂತ ಎಂದು ಇಲ್ಲ. ಅವರು ಸರಿಯಾಗಿ ಅದನ್ನು ಓದಿಲ್ಲ; ಓದಿದ್ದರೂ ಅದನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಇದು

"A member who wishes to bring to the notice of the House any matter which is not a point of order shall give notice to the Secretary in writing stating briefly the point which he wishes to raise in the House together with reasons for wishing to raise it and he shall be permitted to raise it only after the Speaker has given his consent and at such time and date as the Speaker may fix."

ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು. ಈ ರೂಲಿನ ಪ್ರಕಾರ ಆ ಕಡೆಯವರೂ ನಡೆದುಕೊಂಡಿಲ್ಲ, ಈ ಕಡೆಯವರೂ ನಡೆದುಕೊಂಡಿಲ್ಲ. ನಾನು ತಕ್ಷಣ ಹೇಳಿದರೆ ಈ ಕಡೆಯವರು ಏನೂ ಅಪರಾಧ ಮಾಡಿಲ್ಲ. ಈಗ ನನಗೆ ಅನ್ನಿಸುತ್ತಿದೆ, ಅವರು ಹೇಳಿದ್ದು ನಿಜ. ಏಕೆಂದರೆ ಆ ಕಡೆಯ ಮಾನ್ಯ ಸದಸ್ಯರು ಪ್ರತಿದಿವಸ 4–5 ವಿಚಾರ ಎತ್ತುತ್ತಾರೆ. ಆವಾಗ ನಾವು ಅದಕ್ಕೆ ಉತ್ತರ ಅಥವಾ ವಿವರಣೆಯನ್ನು ಕೊಡಲು ಬದ್ಧರು. ಬಹುಶಃ ನೂರಕ್ಕೆ ತೊಂಭತ್ತರಷ್ಟು ಕೇಸ್‌ಗಳಲ್ಲಿ ನಾವು ಉತ್ತರಗಳನ್ನು ಕೊಡುತ್ತಾ ಬಂದಿದ್ದೇವೆ. ಅದು ನಮ್ಮ ತಪ್ಪು. ಅದಕ್ಕೆ ಬದ್ಧರಾಗಿ ನಾವು ನಡೆಯಕೊಂಡಿಲ್ಲವೆಂದು ಹೇಳುತ್ತೇನೆ. ಆದರೆ ನಾನು ಹೇಳುತ್ತೇನೆ, ಪಾರ್ಲಿಮೆಂಟ್‌ನಲ್ಲಿ ನಾನು ನೋಡಿದ್ದೇನೆ, ಅಲ್ಲಿನ ಅನೇಕ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ಅಲ್ಲಿ ಅನೇಕ ಮಹತ್ವದ ವಿಚಾರಗಳನ್ನು ಎತ್ತುತ್ತಾರೆ. ಅಲ್ಲಿ ಆ ವಿಚಾರ ಮುಗಿದುಹೋಗುತ್ತದೆ. ಇದು ಮಹತ್ವದ ವಿಚಾರವಿರಬಹುದು; ಅಥವಾ ಕಡಿಮೆ ಮಹತ್ವದ್ದು ಇರಬಹುದು. ಈ ಮನೆಯಲ್ಲಿ ಇಂತಹ ವಿಚಾರಗಳನ್ನು ಎತ್ತುವುದಕ್ಕೆಂತಲೇ ಈ ಕಲಮ್ ಇದೆ. ಬೇರೆ ಯಾವುದೇ ಉದ್ದೇಶದಿಂದ ಒಂದು ಚರ್ಚೆ ಮಾಡುವುದಕ್ಕಾಗಲೀ ಅಥವಾ ಸರ್ಕಾರದಿಂದ ವಿವರವಾದ ಮಾಹಿತಿ ಪಡೆಯುವ ಉದ್ದೇಶಕ್ಕಾಗಲೀ ಮಾನ್ಯ ಸದಸ್ಯರು ಇಂತಹ ವಿಚಾರಗಳನ್ನು ಎತ್ತುವುದಾದರೆ ಬೇಕಾದಷ್ಟು ಅವಕಾಶಗಳು ಈ ರೂಲ್ಸ್‌ನಲ್ಲಿವೆ. ಅದು ಪ್ರಶ್ನೆ ಮುಖಾಂತರವಾಗಲೀ, ಅಲ್ಪಕಾಲಾವಧಿ ಪ್ರಶ್ನೆ ಮೂಲಕವಾಗಲೀ ಅಥವಾ ಎರಡೂವರೆ ಗಂಟೆಯ ಚರ್ಚೆಯ ಮೂಲಕವಾಗಲೀ ಅಥವಾ ಅಲ್ಪಕಾಲಾವಧಿ ಚರ್ಚೆ ಮೂಲಕವಾಗಲೀ ಮಾಡುವುದಕ್ಕೆ ಅವಕಾಶಗಳಿವೆ. ನಾನು ಮಾಡಿರುವ ಅಪರಾಧವಾದರೂ ಏನು ? ಅವರು ಎತ್ತಿದ ವಿಚಾರಕ್ಕೆ ತಕ್ಷಣ ಉತ್ತರ ಕೊಡಲು ನಾನೇನು ದಿವ್ಯದರ್ಶಿಯಲ್ಲ, ಇಲ್ಲಿರುವವರು ಯಾರೂ ದಿವ್ಯ ದರ್ಶಿಯಲ್ಲ. ಅಕಸ್ಮಾತ್ ಇವತ್ತೋ, ನಿನ್ನೆಯೋ ಪೇಪರ್‌ನಲ್ಲಿ ಬಂದಿದ್ದರೆ ಅದಕ್ಕೆ ಸಂಬಂಧಪಟ್ಟ ವಿಚಾರವನ್ನು ತರಿಸಿಕೊಂಡಿದ್ದೇವೆ, ಅದರ ಬಗ್ಗೆ ಮಾಹಿತಿ ಇದೆ, ಅದಕ್ಕೆ ಉತ್ತರ ಹೇಳುತ್ತೇನೆ. ಆದರೆ ಪೇಪರ್‌ನಲ್ಲಿ ಬರಲಿಲ್ಲವೆಂದು ಇದ್ದಕ್ಕಿದ್ದಹಾಗೆ ವಿಚಾರ ಎತ್ತಿದರು. ಅದಕ್ಕೆ ನಾನು ಹೇಳಿದೆ, ಅದಕ್ಕೆ ಸಂಬಂಧಪಟ್ಟ ಮಾಹಿತಿ ತರಿಸಿಕೊಡುತ್ತೇ

ಮೆದು ಹೇಳಿದೆ. ಆ ರೀತಿ ಹೇಳುವುದಕ್ಕೆ ಕಡ್ಡಾಯವೇನಿಲ್ಲ. ಮಾನ್ಯ ಸದಸ್ಯರುಗಳಿಗೆ ಬೇಕಾದಷ್ಟು ಅವಕಾಶ ಗಳಿವೆ, ಆ ಅವಕಾಶವನ್ನು ಉಪಯೋಗಿಸಿಕೊಳ್ಳಲಿ, ಯಾವ ಒಂದು ಸೀಮಿತವಾದ ಉದ್ದೇಶಕ್ಕೆ ಈ ಕಲಮ್‌ನ್ನು ಉಪಯೋಗಿಸಿದ್ದಾರೋ ಅದರ ಉಪಯೋಗವನ್ನು ಈ ರೀತಿ ಮಾಡಿಕೊಂಡರೆ ಅದು ಸರಿಯಾದುದಲ್ಲ ಎಂದು ನನ್ನ ನಮ್ರವಾದಂಥ ಅಭಿಪ್ರಾಯ. ಮಾನ್ಯ ಬಂಗಾರಪ್ಪನವರು ಕೇಳಿದರು—ಎಷ್ಟು, ಒಂದು ವಾರದಲ್ಲಿ ಕೊಡುತ್ತೀರಾ ? ಅಥವಾ 4 ದಿವಸದಲ್ಲಿ ಕೊಡುತ್ತೀರಾ ಎಂದು. ನಾನು ಹೇಳಿದೆ ಒಂದು ವಾರ ಅಥವಾ ಅದಕ್ಕಿಂತ ಮೊದಲೇ ವರದಿಯನ್ನು ಕೊಡುತ್ತೇವೆಂದು ಹೇಳಿ ಇಂತಿಷ್ಟೇ ದಿವಸಗಳಲ್ಲಿ ಕೊಡಬೇಕೆಂದರೆ ಅದು ಆಗುವುದಿಲ್ಲ. ಅದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ಈ ಕಲಮಿನ ಕೆಳಗಡೆ ಸರ್ಕಾರದ ಮೇಲೆ ಯಾವುದೇ ರೀತಿಯ ಕಡ್ಡಾಯ ಹೊರಿಸುವುದಕ್ಕಾಗುವುದಿಲ್ಲವೆಂದು. ಮಾಡುವುದಾದರೆ ಬೇರೆ ಕಲಮಿನ ಕೆಳಗಡೆ ಮಾಡಬಹುದು. ಪುನಃ ಆ ಕಡೆ ಕುಳಿತಿದ್ದಂಥ ಮಾನ್ಯ ಸದಸ್ಯರಿಗೆ ಹೇಳುತ್ತಿದ್ದೇನೆ, ಇದು ವ್ಯಾಪ್ತಿಯ ಹೊರಗೆ ಹೋಗಿ, ಸರ್ಕಾರ ಇದೇ ರೀತಿ ಮಾಡಬೇಕೆಂದು ಹೇಳಿದರೆ ನಾನು ಅದಕ್ಕೆ ಮಣಿಯುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದರಲ್ಲಿ ಏನು ಇದೆ ಅಂದರೆ ಈಗ ಟೈಮ್ ಡೇಟ್ ಏಕೆ ಫಿಕ್ಸ್ ಮಾಡಬೇಕು ?

ಅಧ್ಯಕ್ಷರು.—ನೀವು ಆ ವಿಚಾರ ಆಗಲೇ ಹೇಳಿದ್ದೀರಲ್ಲಾ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಕೆಲವು ವಿಚಾರಗಳನ್ನು ನಾನು ಈಗ ಹೇಳಬೇಕಾಗುತ್ತದೆ; ಸನ್ಮಾನ್ಯ ಮುಖ್ಯಮಂತ್ರಿಯವರು ಈ ವಿಚಾರದಲ್ಲಿ ಒಂದು ಮಾತನ್ನು ಹೇಳಿದರು : The eyes and ears of the Government should always be kept open.

ಶ್ರೀ ಎಂ. ವೀರಪ್ಪ ಮೊಯ್ಲಿ.—ಒಂದು ಜರೂರಾದ ವಿಚಾರ, ಎತ್ತಲೇಬೇಕಾದಂಥ ಸಂದರ್ಭ ಬಂದಾಗ, ಸರ್ಕಾರ ಇದರ ಬಗ್ಗೆ ಕಾರ್ಯಾಚರಣೆ ಮಾಡಬೇಕಾದಂಥ ಪ್ರಸಂಗ ಬಂದಾಗ ಅದನ್ನು ಮಾನ್ಯ ಸದಸ್ಯರು ಎತ್ತಬೇಕಾಗುತ್ತದೆ. ಅದಕ್ಕೆ ಸರ್ಕಾರದ ಕಡೆಯಿಂದ ಸಮಂಜಸವಾದ ಉತ್ತರವೂ ದೊರೆಯಬೇಕಾಗುತ್ತದೆ. ತಾವು ಮೊನ್ನೆ ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ಹೇಳಿದ್ದೀರೆಂದರೆ 10 ಗಂಟೆ ಮೊದಲೇ ಈ 334 ರ ಕೆಳಗೆ ನೋಟೀಸ್ ಕೊಟ್ಟರೆ ನಾನು ಅದರ ನಕಲನ್ನು ಸರ್ಕಾರಕ್ಕೆ ಕಳುಹಿಸುವುದಕ್ಕಾಗುತ್ತದೆಂದು ಹೇಳಿದ್ದೀರಿ. ಈ ದಿವಸ ಇದರ ಬಗ್ಗೆ ಸ್ಪಷ್ಟವಾಗಿ ಚರ್ಚೆಯಾಗಿತ್ತು, ನಿರ್ಧಾರವಾಗಿತ್ತು. ಇಲ್ಲದೇ ಇದ್ದರೆ 10 ಗಂಟೆ ಏಕೆ 12 ಗಂಟೆಗೆ ಕೊಡಬಹುದಾಗಿತ್ತು.

MR. SPEAKER.—It is some sort of an emergency provision.

ಶ್ರೀ ಎಂ. ವೀರಪ್ಪ ಮೊಯ್ಲಿ :—ನಾನು ಕಾನೂನಿನ ಇಂಟರ್‌ಪ್ರಿಟೇಷನ್ ಮಾಡುವುದಕ್ಕೆ ಈಗ ಹೋಗುತ್ತಿಲ್ಲ. ಹಾಗಿದ್ದರೂ 10 ಗಂಟೆ ಮೇಲೆ ನೋಟೀಸ್ ಕಳುಹಿಸುವುದಕ್ಕೆ ತಾವು ಏಕೆ ಹೇಳಿದಿರಿ ? ಆದರೆ ಅವರು ಯಾವಾಗ ಎತ್ತುವುದಕ್ಕೆ ಅಥವಾ ಪ್ರಸ್ತಾಪ ಮಾಡುವುದಕ್ಕೆ ಬಿಟ್ಟಿದ್ದೀರೋ ಆಗ ನಾವು ಸರ್ಕಾರದಿಂದ ಇದಕ್ಕೆ ಉತ್ತರ ಕೊಡಲೇ ಬೇಕಾಗುತ್ತದೆಂದು ತಿಳಿದುಕೊಂಡಿದ್ದೆವು. ಇದರ ಲಿಟರಲ್ ಅರ್ಥವನ್ನು ತಾವು ಈ ರೀತಿ ಅರ್ಥ ಮಾಡಿಕೊಳ್ಳುವುದಾದರೆ ಅದನ್ನು ತೆಗೆದುಹಾಕುವುದು ಒಳ್ಳೆಯದು. ಸರ್ಕಾರ ಕಣ್ಣು ಮುಚ್ಚಿ ಕುಳಿತುಕೊಳ್ಳುವುದಾದರೆ ನಾವು ಇದರ ಮೂಲಕ ಏಕೆ ಎತ್ತಬೇಕು ?

ಅಧ್ಯಕ್ಷರು.—ದಯಮಾಡಿ ಕುಳಿತುಕೊಳ್ಳಿ. 334 ರ ನಿಯಮಾವಳಿ ವ್ಯಾಪ್ತಿಯ ಪ್ರಶ್ನೆ ಚರ್ಚೆ ಮಾಡಿದವರೇ ವಿರೋಧಪಕ್ಷದ ನಾಯಕರು. ಇವನ್ನು ಸ್ವಿಕ್ಟ್ ಆಗಿ ಮಾಡಬೇಕೇ ? ಬಿಡಬೇಕೇ ? ಎಂಬುದು ನನಗೆ ಬಿಟ್ಟದ್ದು.

ಶ್ರೀ ಕೆ. ಹೆಚ್. ರಂಗನಾಥ್.—ಸಾರ್ವಜನಿಕ ಹಿತದೃಷ್ಟಿಯಿಂದ ಈ ಅಧಿಕಾರವನ್ನು ತಾವು ಇಟ್ಟು ಕೊಂಡರೆ ಒಳ್ಳೆಯದು; ನಿಮ್ಮ ಕೈಗೆ ಕೊಟ್ಟರೆ ನಾವು ಬೇರೆ ರೀತಿ ಉಪಯೋಗಿಸಿಕೊಳ್ಳಬಹುದು.

ಅಧ್ಯಕ್ಷರು.—334 ವ್ಯಾಪ್ತಿಯ ಕೆಳಗಡೆ ನನ್ನ ಅಧಿಕಾರ ಏನಿದೆ, ತಾವು ಹೇಳಿದ ಹಾಗೆ 334 ನೇ ಕಲಮಿನಲ್ಲಿ 'Permitted to raise only after the Speaker has given his consent'. I stress here, 'consent to raise the issue'. That is point No. 1.

ಶ್ರೀ ಕೆ. ಹೆಚ್. ರಂಗನಾಥ್.—ಆಯಿತು ಸ್ವಾಮಿ, ಕನ್ನಡದಲ್ಲಿ ಹೇಳಿ, ನೀವು ಇಂಗ್ಲೀಷ್‌ನಲ್ಲಿ ಓದಿದರೆ ತೊಂದರೆಯಾಗುತ್ತದೆ. ಅದನ್ನು ಕನ್ನಡದ ರೂಲ್ಸ್‌ನಲ್ಲಿ ಓದಿ.

ಶ್ರೀ ಎಂ. ರಘುಪತಿ.—ಕನ್ನಡದಲ್ಲೂ ಪುಸ್ತಕ ಇದ್ದೇ ಇದೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ನಾನು ಮಾನ್ಯ ರಂಗನಾಥ್ ಅವರು, ನಮ್ಮ ಹಿಂದಿನ ಅಧ್ಯಕ್ಷರು ಈಗ ತೋರಿಸಿದ್ದಕ್ಕಿಂತ ಹೆಚ್ಚು ಜ್ಞಾನ ಇದೆಯೆಂದು ತಿಳಿದುಕೊಂಡಿದ್ದೇನೆ. ಅವರಿಗೆ ಬೇಕಾದರೆ ಕನ್ನಡದಲ್ಲಿ ಓದಿ ಹೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಕನ್ನಡದಲ್ಲಿ ಓದಿಲ್ಲ, ಇಂಗ್ಲೀಷ್‌ನಲ್ಲಿ ಓದಿದರೆ ತೊಂದರೆ ಬರುತ್ತದೆ: ಕನ್ನಡದಲ್ಲಿ ಓದಿದರೆ ಸಹಾಯವಾಗುತ್ತದೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಓದಬೇಕೆ ?

ಶ್ರೀ ಕೆ. ಹೆಚ್. ರಂಗನಾಥ್.—ಇಲ್ಲ, ನನಗೆ ಅರ್ಥವಾಯಿತು.

ಶ್ರೀ ಧನಂಜಯ ಕುಮಾರ್.—ಸ್ವಾಮಿ, ನಾನು ಇದರ ಬಗ್ಗೆ ಒಂದು ವಿಚಾರವನ್ನು ಹೇಳುತ್ತೇನೆ.

ಅಧ್ಯಕ್ಷರು.—ಇಲ್ಲದೆ ಇರುವಂತಹ ಪ್ರಸ್ತಾಪ ಮಾಡಬೇಡಿ; ಈಗ 334 ನಿಯಮದ ಮೇಲೆ ಕೆಲವು ವಿಚಾರಗಳನ್ನು ಮಾಡುವುದಕ್ಕೆ ಮುಖ್ಯಮಂತ್ರಿಯವರು ಹೇಳುವುದನ್ನು ಕೇಳಿರಿ.

ಶ್ರೀ ಧನಂಜಯ ಕುಮಾರ್.—ಎತ್ತಿದ ವಿಚಾರಕ್ಕೆ, ಇಲ್ಲಿ ಪ್ರಸ್ತಾಪಮಾಡಿದ ವಿಚಾರಕ್ಕೆ ಸರ್ಕಾರದಿಂದ ಉತ್ತರ ಕೊಡುವುದಿಲ್ಲವೆಂದರೆ ಅದನ್ನು ಇಲ್ಲಿ ಪ್ರಸ್ತಾಪ ಮಾಡಿ ಏನು ಪ್ರಯೋಜನ ?

ಅಧ್ಯಕ್ಷರು.—ತಾವು ಸ್ವಲ್ಪ ಕುಳಿತುಕೊಳ್ಳಿ. ಧನಂಜಯ ಕುಮಾರ್.

ಶ್ರೀ ಕೆ. ವಸಂತ ಬಂಗೇರಾ.—ಜನಿವಾರ ಇದ್ದವರಿಗೇ ಈ ಗತಿಯಾದರೆ ಬೇರೆಯವರ ಗತಿ ಏನು ?

ಅಧ್ಯಕ್ಷರು.—334 ರ ವಿಷಯ ಇದು...

(ಗೊಂದಲ)

ಶ್ರೀ ಜೆ. ಡಿ. ಸೋಮಪ್ಪ.—ಜನಿವಾರ ಇದ್ದವರು ಯಾರು, ಇಲ್ಲದಿರುವವರು ಯಾರು ?

ಅಧ್ಯಕ್ಷರು.—ನಾನು ನಿಂತುಕೊಂಡಿದ್ದೇನೆ. ದಯವಿಟ್ಟು ಎಲ್ಲಾ ಸದಸ್ಯರೂ ಕುಳಿತುಕೊಳ್ಳಬೇಕು. ಲೋಕಸಭೆಯ 337ನೇ ನಿಯಮ ಏನು ಇದೆ, ಆ ನಿಯಮಕ್ಕೆ ಅನುಗುಣವಾಗಿ ಈ 334 ನೇ ನಿಯಮವನ್ನು ಇಲ್ಲಿ ಸೇರಿಸಿದ್ದೇವೆ. ನನಗೆ ತಿಳಿದಮಾಗೆ 337 ನೇ ನಿಯಮಕ್ಕೆ ಲೋಕಸಭೆಯಲ್ಲಿ ಏಕೆ ಆಸ್ಪತೆ ಬಂತು ಎಂದರೆ ನಾವು ಏನು ಶೂನ್ಯವೇಳೆ ಎಂದು ಹೇಳುತ್ತಿದ್ದವು. ಆದರಲ್ಲಿ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರುವಂತಹ ಒಂದು ಸಂಪ್ರದಾಯ ಸಂಸತ್ತಿನಲ್ಲಿ ಅಥವಾ ಲೋಕಸಭೆಯಲ್ಲಿ ಇತ್ತು. ಆ 337 ನೇ ನಿಯಮಕ್ಕೆ ನಾವು 334 ನೇ ನಿಯಮವನ್ನು ಆಳವಡಿಸಿದ್ದೇವೆ. 337 ನೇ ನಿಯಮದಲ್ಲಿ ಏನೇನು ಅಂಶಗಳನ್ನು ಪಾಲಿಸ ಬೇಕೆಂದು ಇತ್ತೋ ಅದನ್ನು ಇದರಲ್ಲಿ ಹೇಳಿದ್ದೇವೆ. ಒಂದು ರಿಲೆವೆಂಟ್ ಮಾತನ್ನು ಇಲ್ಲಿ ಓದುತ್ತೇನೆ:

"The Speaker does not direct the Minister to make a statement on a matter raised under Rule 377. If the Minister so desires, he may make a statement on the subject with the permission of the Speaker."

"If he so desires"—This is the position.

ಇಲ್ಲಿ ಮತ್ತೊಂದು ಅಂಶವನ್ನು ವಿಶೇಷವಾಗಿ ಗಮನಿಸಬೇಕಾದದ್ದು ಎಂದರೆ ಮಾನ್ಯ ಪ್ರತಿಪಕ್ಷದ ನಾಯಕರು ನಾವು ಬಿ.ಎ.ಸಿ.ಯಲ್ಲಿ ಒಂದು ನಿರ್ಣಯವನ್ನು ಮಾಡಿದ್ದೇವೆ, ಒಪ್ಪಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಅದು ಸತ್ಯಕ್ಕೆ ದೂರವಾದ ಮಾತು. ನಡೆದಿದ್ದು ಚರ್ಚೆ ಏನು ? 334 ನೇ ನಿಯಮದ ವ್ಯಾಪ್ತಿಯಲ್ಲಿ ಒಂದೆರಡು ವಿಚಾರಗಳನ್ನು ಸ್ವಲ್ಪ ಮುಂಚೆಯೇ ಕಳಿಸಿದರೆ, ಹತ್ತು ಗಂಟೆಗೆ ಮುಂಚೆ ಕಳಿಸಿದರೆ ಏನಾದರೂ ಮಾಹಿತಿ ತರಿಸುವುದಕ್ಕೆ ಸಾಧ್ಯವಿದ್ದರೆ ಪ್ರಯತ್ನ ಮಾಡೋಣ, ಅದಕ್ಕಾಗಿ ಆಯಾಯ ದಿವಸದ ಅಜೆಂಡಾದಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡೋಣವೆಂದು ಹೇಳಿ, ಇವತ್ತು ಈ ಕಾರಣಕ್ಕಾಗಿ 334ನ್ನು ಸೇರಿಸಿದ್ದೇವೆ. ಸರಿಯಾದ ಉತ್ತರ ಬೇಕು ಎಂದರೆ ಕಾಲಾವಕಾಶ ಬೇಕಾಗುತ್ತದೆ. 334 ರ ವ್ಯಾಪ್ತಿಯಲ್ಲಿ ನಿಯಮವನ್ನು ನನ್ನಿಂದ ಬದಲಾಯಿಸಲು ಈ ನಿಯಮದ ಕೆಳಗಡೆ ಸಾಧ್ಯವಿಲ್ಲ. ನಾನು ಎಲ್ಲಾ ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಪ್ರಸ್ತಾಪ ಇಲ್ಲಿ ಸೀಮಿತವಾಗಿದೆ. ಶ್ರೀ ಬಂಗಾರಪ್ಪನವರು ಹೇಳಿದ ವಿಷಯಕ್ಕೆ ಆದಷ್ಟು ಶೀಘ್ರವಾಗಿ ಉತ್ತರ ತರಿಸಿ ಕೊಡುತ್ತೇನೆ. ಈಗ ಶ್ರೀ ಸೂರ್ಯನಾರಾಯಣರಾವ್ ಅವರು ಮಾತನಾಡಲಿ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ,

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ, 334 ರಲ್ಲೇ ಇಡೀ ದಿವಸ ಚರ್ಚೆಯಾಗುತ್ತಿದೆ. ನಾವು ಕೇಳಿದ್ಯಾವುದೂ ಚರ್ಚೆಗೆ ಬರುತ್ತಿಲ್ಲ. ಅದಕ್ಕೆ ಸಮಯ ಸಾಕಾಗುತ್ತಿಲ್ಲ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಅಧ್ಯಕ್ಷರೇ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ...

MR. SPEAKER.—We have to complete about 4 notices under Rule 334. If the Members co-operate, I think we can go ahead.

ಇದನ್ನು ಬೇಗ ಮುಗಿಸೋಣ.

ಶ್ರೀ ಎಸ್. ಬಂಗಾರಪ್ಪ.—ತಾವು ಉತ್ತರ ಕೊಡುತ್ತಾ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದೀರಿ. 334ರ ವ್ಯಾಪ್ತಿಯನ್ನು ವಿಸ್ತರಿಸಬೇಕೆನ್ನುವುದು ನನ್ನ ಅಭಿಪ್ರಾಯವಲ್ಲ. ತಮಗೆ ಸಂಪೂರ್ಣ ಸಹಕಾರ ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಅವರು ಉತ್ತರ ಕೊಡಲಿ. ತಾವು ಬೇರೆ ವಿಚಾರವನ್ನು ತೆಗೆದು ಕೊಳ್ಳಬಹುದು.

ಶ್ರೀ ಕೆ. ಜಿ. ಮಹೇಶ್ವರಪ್ಪ.—334ರ ವ್ಯಾಪ್ತಿಯ ಬಗ್ಗೆ ವಿಶ್ಲೇಷಣೆ ಇಲ್ಲಿ ಆಗಿದೆ. ಇದರ ವ್ಯಾಪ್ತಿ ಯೊಳಗೆ ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟಮೇಲೆ I don't agree, I don't tolerate ಎಂದು ಹೇಳುವುದಕ್ಕೆ ಈ ವ್ಯಾಪ್ತಿಯಲ್ಲಿ ಅವಕಾಶ ಇದೆಯೆ? ಒಬ್ಬ ಸಾಮಾನ್ಯ ಸದಸ್ಯರು...

ಒಬ್ಬ ಮಾನ್ಯ ಸದಸ್ಯರು.—ಸಾಮಾನ್ಯ ಸದಸ್ಯರು ಎಂದರೆ ಯಾರು ಹೇಳಿ?

ಶ್ರೀ ಎಂ. ಮಹದೇವ್.—ಸಾಮಾನ್ಯ ಸದಸ್ಯರು ಎಂದು ಹೇಳಿದ್ದಾರೆ. ಸಾಮಾನ್ಯ ಸದಸ್ಯರು ಯಾರು? ಹೆಚ್ಚಿನ ಸದಸ್ಯರು ಯಾರು?

(ಗೊಂದಲ)

ಅಧ್ಯಕ್ಷರು.—ಇಷ್ಟೊಂದು ಜನ ಒಟ್ಟಿಗೇ ನಿಂತುಕೊಂಡರೆ ಹೇಗೆ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಸಾಮಾನ್ಯ ಸದಸ್ಯರು ಎಂದು ಪದ ಬಳಸಿರುವುದು ಸರಿಯೆ?

ಶ್ರೀ ಪುಟ್ಟಪ್ಪತಿ.—ಅಧ್ಯಕ್ಷರೇ, ಸಾಮಾನ್ಯ ಸದಸ್ಯರು ಎಂದು ಅವರು ಹೇಳಲಿಲ್ಲ. ಸನ್ಮಾನ್ಯ ಸದಸ್ಯರು ಎಂದು ಅವರು ಹೇಳಿದ್ದು.

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೇ, ಅವರಿಗೆ ಸ್ವಲ್ಪ ಕಿವಿ ಕಿವುಡಾಗಿರಬೇಕು. ಸನ್ಮಾನ್ಯ ಸದಸ್ಯರು ಅಂತಾನೇ ಅವರು ಹೇಳಿದ್ದು.

(ಗೊಂದಲ)

ಶ್ರೀ ಎಂ. ಮಹದೇವ್.—ಅಧ್ಯಕ್ಷರೇ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಶ್ರೀ ಮಹೇಶ್ವರಪ್ಪನವರು 'ಸಾಮಾನ್ಯ ಸದಸ್ಯರು' ಎಂದು ಹೇಳಿದ್ದಾರೆ...

ಶ್ರೀ ಕೆ. ಜಿ. ಮಹೇಶ್ವರಪ್ಪ.—ಸ್ವಾಮಿ, ನಾನು ಸಾಮಾನ್ಯವಾಗಿ ಸದಸ್ಯರು ಎಂದು ಹೇಳಿದ್ದು.

ಶ್ರೀ ಎಂ. ಮಹದೇವ್.—ಸಾಮಾನ್ಯ ಸದಸ್ಯರು ಎಂದು ಹೇಳಿದ್ದಾರೆ. ಸಾಮಾನ್ಯ ಸದಸ್ಯರು ಎಂದರೆ ಯಾರು? ಇದರ ಬಗ್ಗೆ ನಮಗೆ ವಿವರಣೆ ಬೇಕಾಗಿದೆ. ಇನ್ನೊಬ್ಬ ಸನ್ಮಾನ್ಯ ಸದಸ್ಯರು ಕೇಳಿಕೊಂಡವರಿಗೆ ಕಿವಿ ಕಿವುಡಾಗಿದೆ ಎಂದು ಹೇಳಿದರು. ಇವರೇನು ಕಿವಿ ತಜ್ಞರೆ? ಇದರ ಬಗ್ಗೆ ವಿವರಣೆ ಕೊಡಬೇಕು.

ಶ್ರೀ ಆರ್. ಎನ್. ನಾಯಕ್.—ಸಾಮಾನ್ಯ ಸದಸ್ಯರು ಎಂದು ಹೇಳಿರುವುದು ಯಾವ ಅರ್ಥದಲ್ಲಿ? ಅದಕ್ಕೆ ಸ್ಪಷ್ಟೀಕರಣ ಕೊಡಲಿ.

ಅಧ್ಯಕ್ಷರು.—ಅವರು ಸಾಮಾನ್ಯವಾಗಿ ಅಂತ ಹೇಳಿದ್ದಾರಂತಲ್ಲ. ಇದನ್ನು ಪುನಃ ಮುಂದುವರೆಸುವುದು ಬೇಡ.

(iv) ವೈಕೊ ಕಾರ್ಖಾನೆಯಲ್ಲಿ ಸ್ವಯಂಚಾಲಿತ ಗಣಕ ಯಂತ್ರಗಳನ್ನು ತಂದಿರುವ ಬಗ್ಗೆ

ಶ್ರೀ ಎಸ್. ಸೂರ್ಯನಾರಾಯಣ ರಾವ್ (ವರ್ತೂರು).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಪ್ರಮುಖ ಕೈಗಾರಿಕೆಗಳಲ್ಲಿ ಒಂದಾದ ವೈಕೊ ಕಾರ್ಖಾನೆ ಅಪಾರ ಲಾಭ ಗಳಿಸುತ್ತಿದ್ದರೂ ಕೂಡ ಸ್ವಯಂಚಾಲಿತ ಆಧುನಿಕ ಗಣಕಯಂತ್ರಗಳನ್ನು ತಂದು ಸುಮಾರು ಒಂದೂವರೆ-ಎರಡು ಸಾವಿರ ಕಾರ್ಮಿಕ ರನ್ನು ಕೆಲಸದಿಂದ ಹೊರಗಟ್ಟುವ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ಪ್ರತಿಭಟನೆ ಮಾಡಿ ಸುಮಾರು ಆರು ಸಾವಿರ ಕಾರ್ಮಿಕರು ಇವತ್ತು ಮುಷ್ಕರ ಮಾಡಿದ್ದಾರೆ. ಏಕೆಂದರೆ ಈ ದೇಶದಲ್ಲಿ ನಿರುದ್ಯೋಗ ಬೆಳೆಯುತ್ತಿರುವ ಕಾಲಕ್ಕೆ ಅಪಾರವಾದ ಲಾಭವನ್ನು ಗಳಿಸುವ ಉದ್ದೇಶದಿಂದ ಇಂತಹ ಸ್ವಯಂಚಾಲಿತ ಗಣಕ ಯಂತ್ರಗಳನ್ನು ಹಾಗೂ ಆಧುನಿಕ ಯಂತ್ರಗಳನ್ನು ಈ ಸಂಸ್ಥೆಯವರು ತರಿಸಿರುವುದರಿಂದ ಬಹಳ ತೊಂದರೆಯಾಗಿದೆ. ಇದರಿಂದ ಕಾರ್ಮಿಕರ ಸಮಸ್ಯೆಯು ಇನ್ನೂ ಹೆಚ್ಚು ಆಗುವ ಸಂಭವ ಇದೆ. ಮತ್ತೆ ನಿರುದ್ಯೋಗ ಸಮಸ್ಯೆ ಕೂಡ ಇನ್ನೂ ಹೆಚ್ಚು ಆಗುವ ಸಂಭವ ಇದೆ. ಮತ್ತೆ ಅಲ್ಲಿರತಕ್ಕಂತಹ ಕಾರ್ಮಿಕರ ಸಂಘಕ್ಕೆ ಕಳೆದ 4-6 ವರ್ಷಗಳಿಂದ ಚುನಾವಣೆಯಿಲ್ಲ. ಇದರಿಂದಾಗಿ ಅಲ್ಲಿ ಕೆಲಸ ಮಾಡುತ್ತಿರತಕ್ಕಂತಹ ಕಾರ್ಮಿಕರು ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಸಂಘದ ಚುನಾವಣೆಯನ್ನು ನಡೆಸುವ ಬಗ್ಗೆ ಮತ್ತು ಆಧುನಿಕ ಸ್ವಯಂಚಾಲಿತ ಯಂತ್ರಗಳನ್ನು ಸಂಸ್ಥೆಗೆ ತಂದು ಅಲ್ಲಿರತಕ್ಕಂಥ ಕಾರ್ಮಿಕರುಗಳನ್ನು ಹೊರಗೆ ಅಟ್ಟುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಬೆಳೆಯುತ್ತಿರುತಕ್ಕಂತಹ ನಿರುದ್ಯೋಗ ಸಮಸ್ಯೆಯನ್ನು ಕಡಿಮೆ ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದು ಕೊಳ್ಳುತ್ತದೆ? ಅವರೆಲ್ಲರೂ ಮುಷ್ಕರ ಮಾಡುವುದಕ್ಕೆ ವಿಧಾನ ಸೌಧದ ಪಕ್ಕಕ್ಕೆ ಬಂದಿದ್ದಾರೆ. ಬಹು